# ಕಲ್ಲಿನ ಹಾದಿಯಲ್ಲಿ ಹೂವು ಅರಳಿ

ಪ್ರವೀಣ ಕುಲಕರ್ಣಿ



ಯಾವುದೇ ಪ್ರಶಸ್ತಿ–ಪುರಸ್ಕಾರ ಸಿಕ್ಕಾಗ, ಅದನ್ನು ಪಡೆದ ಯಾರಿಗಾದರೂ ಖುಷಿಯಾಗುವುದು ಸಹಜ. ಆದರೆ, ಇಲ್ಲೊಬ್ಬ ಆಟಗಾರ್ತಿ ಇದ್ದಾರೆ. ಅವರಿಗೆ ಸಿಕ್ಕ ಪ್ರಶಸ್ತಿಯು ಅವರ ಆಟದಲ್ಲಿ ಉತ್ಸಾಹ ತುಂಬಿರುವುದಂತೂ ನಿಜ. ಅದರಾಚೆಗೆ ಅವರು ಈ ಪ್ರಶಸ್ತಿಯನ್ನು ಸಂಭ್ರಮಿಸಲು ಬಲವಾದ ಇನ್ನೂ ಒಂದು ಕಾರಣವಿದೆ. ಬಡತನದ ಬೇಗೆಯಲ್ಲಿ ಬೇಯುತ್ತಿರುವ ಅವರ ಕುಟುಂಬಕ್ಕೆ ಈ ಪ್ರಶಸ್ತಿ ಪನ್ನೀರಿನ ಸಿಂಚನ ಮಾಡಿರುವುದೇ ಅವರ ಈ ಖುಷಿಗೆ ಕಾರಣ. ಜಾರ್ಖಂಡ್‌ನ 22ರ ಹರೆಯದ ಹಾಕಿ ಆಟಗಾರ್ತಿ ಸಲಿಮಾ ಟೇಟೆ, ಭಾರತದ ಮಹಿಳಾ ಹಾಕಿಯಲ್ಲಿ ಕಳೆದ ಆರು ವರ್ಷಗಳಿಂದ ಹೆಜ್ಜೆಗುರುತು ಮೂಡಿಸುತ್ತಾ ಬಂದವರು. ಈ ಮಿಡ್ ಫೀಲ್ಡರ್, ತಂಡದ ಬೆನ್ನೆಲುಬಾಗಿ ಬೆಳೆಯುತ್ತಾ, ಗೆಲುವಿನಲ್ಲಿ ಮಿಂಚುತ್ತಾ ಖುಷಿಪಡುತ್ತಾ ಮುನ್ನಡೆದವರು. ಈ ಹಾಕಿಯಾತ್ರೆಯಲ್ಲಿ ಕುಟುಂಬದ ಸಂಕಷ್ಟವನ್ನು ಮೆಟ್ಟಿ ನಿಲ್ಲಲು ಪ್ರಯತ್ನಿಸಿದವರು.

ಏಷ್ಯನ್ ಕ್ರೀಡಾಕೂಟದಲ್ಲಿ ಭಾರತೀಯ ಮಹಿಳಾ ಹಾಕಿ ತಂಡ ಪದಕ ಗೆಲ್ಲುವಲ್ಲಿ ಸಲಿಮಾ ಅವರ ಕೊಡುಗೆಯೂ ಇದೆ. ವರ್ಷದುದ್ದಕ್ಕೂ ಅವರು ತೋರುತ್ತಾ ಬಂದಿರುವ ಸಾಧನೆಗಾಗಿ ‘ಹಾಕಿ ಇಂಡಿಯಾ’, ಅವರನ್ನು ‘ವರ್ಷದ ಆಟಗಾರ್ತಿ’ಯನ್ನಾಗಿ ಆಯ್ಕೆಮಾಡಿದೆ. ಪ್ರಶಸ್ತಿಯೊಂದಿಗೆ ಬಂದ ₹ 25 ಲಕ್ಷ ಅವರ ಕುಟುಂಬದ ಬಡತನದ ಸಂಕಷ್ಟವನ್ನು ದೂರಮಾಡಲು ಬಹುಮಟ್ಟಿಗೆ ನೆರವಿಗೆ ಬಂದಿದೆ.

‘ನನಗೆ ಪ್ರಶಸ್ತಿ ಬಂದಿರುವುದನ್ನು ಕೇಳಿ ಸಹಜವಾಗಿಯೇ ನನ್ನ ಕುಟುಂಬಕ್ಕೆ ಸಂತಸವಾಗಿದೆ. ನನ್ನ ಬಗೆಗೆ ನನ್ನ ಕುಟುಂಬದವರಿಗೆಲ್ಲ ಹೆಮ್ಮೆ. ಪ್ರಶಸ್ತಿಯೊಂದಿಗೆ ಬಹುಮಾನದ ರೂಪದಲ್ಲಿ ದೊಡ್ಡ ಮೊತ್ತವೂ ಸಿಕ್ಕಿರುವುದು ನನ್ನ ಹರ್ಷವನ್ನು ಇಮ್ಮಡಿಗೊಳಿಸಿದೆ. ಏಕೆಂದರೆ, ನನಗೆ ಸಿಕ್ಕ ಈ ಮೊತ್ತ ನನ್ನ ಕುಟುಂಬಕ್ಕೆ ಸೇರಿದ್ದಾಗಿದೆ. ಕುಟುಂಬದ ಸಂಕಷ್ಟವನ್ನು ದೂರ ಮಾಡಲು ಈ ಬಹುಮಾನದಿಂದ ಸಾಧ್ಯವಾಗಲಿದೆ’ ಎಂದು ಹೇಳುತ್ತಾರೆ ಸಲಿಮಾ. ಭಾರತೀಯ ಹಾಕಿ ಜಗತ್ತಿನ ಈ ತಾರೆ ಉದಯಿಸಿದ್ದು ಜಾರ್ಖಂಡ್‌ನ ಪುಟ್ಟ ಹಳ್ಳಿ ಬಾರ್ಕಿ ಛಾಪರ್ ಎಂಬಲ್ಲಿ. ಸಲಿಮಾ ಅವರದು ರೈತ ಕುಟುಂಬ. ಅವರಿಗೆ ನಾಲ್ವರು ಸಹೋದರಿಯರು ಮತ್ತು ಒಬ್ಬ ಸಹೋದರ ಇದ್ದಾನೆ. ದೈನಂದಿನ ಖರ್ಚಿಗೂ ಪರಿತಪಿಸುತ್ತಿರುವ ಸಲಿಮಾ ಅವರ ಕುಟುಂಬಕ್ಕೆ ಈ ಹಣ ತುರ್ತು ಅಗತ್ಯಗಳನ್ನು ಪೂರೈಸಲು ಸಹಾಯವಾಗಿದೆ.

‘ನಾನು ಇನ್ನಷ್ಟು ಚೆನ್ನಾಗಿ ಆಡಬೇಕು ಎನ್ನುವುದನ್ನೂ ಈ ಪ್ರಶಸ್ತಿ ಸದಾ ನನಗೆ ನೆನಪಿಸುತ್ತದೆ. ಹೀಗಾಗಿ ತರಬೇತಿಯ ಸಣ್ಣ ಕ್ಷಣವನ್ನೂ ನಾನು ಮಿಸ್ ಮಾಡಿಕೊಳ್ಳಲು ಇಷ್ಟಪಡುವುದಿಲ್ಲ. ನಾನು ಏನೆಲ್ಲ ಸುಧಾರಣೆ ಮಾಡಿಕೊಳ್ಳಬೇಕು ಎಂಬುದರ ಅರಿವಿದೆ. ಆ ನಿಟ್ಟಿನಲ್ಲಿ ಹೆಜ್ಜೆ ಹಾಕುವೆ’ ಎಂದು ಸಲಿಮಾ ಹೇಳುತ್ತಾರೆ. 2016ರಲ್ಲಿ ಆಸ್ಟ್ರೇಲಿಯಾ ವಿರುದ್ಧದ ಪಂದ್ಯದ ಮೂಲಕ ಅಂತರರಾಷ್ಟ್ರೀಯ ಹಾಕಿ ಪಂದ್ಯಕ್ಕೆ ಪದಾರ್ಪಣೆ ಮಾಡಿದ ಅವರು ಇದುವರೆಗೆ 107 ಪಂದ್ಯಗಳನ್ನು ಆಡಿದ್ದು, 15 ಗೋಲುಗಳನ್ನು ಬಾರಿಸಿದ್ದಾರೆ. ಟೋಕಿಯೊ ಒಲಿಂಪಿಕ್ ಕೂಟದಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದ ಭಾರತ ತಂಡದಲ್ಲಿ ಸಲಿಮಾ ಕೂಡ ಇದ್ದರು.

ಜಾರ್ಖಂಡ್‌ನ ಕುಗ್ರಾಮದ ಈ ಹುಡುಗಿ ಹಾಕಿ ಕಲಿತದ್ದೇ ಒಂದು ಸಾಹಸಗಾಥೆ. ಸಮತಟ್ಟಿಲ್ಲದ, ಕಲ್ಲುಗಳಿಂದ ಕೂಡಿದ್ದ ಮೈದಾನದಲ್ಲಿ ಸಲಿಮಾ ಮತ್ತು ಅವರ ಗೆಳತಿಯರು ಹಾಕಿ ಕಲಿತರು. ಗೆಳತಿಯರೆಲ್ಲ ಕೂಡಿ ಕಲ್ಲುಗಳನ್ನು ಆಯ್ದು, ಮೈದಾನವನ್ನು ಸ್ವಚ್ಛಗೊಳಿಸಿದ್ದಲ್ಲದೆ, ತಾತ್ಕಾಲಿಕ ಗೋಲ್‌ಪೋಸ್ಟ್‌ಗಳನ್ನೂ ನಿರ್ಮಿಸಿ, ಆಟವಾಡುತ್ತಿದ್ದರು. ಅಲ್ಲಿಯೇ ಅಭ್ಯಾಸ ನಡೆಸುತ್ತಿದ್ದರು. ಅವರ ಬಳಿ ಸರಿಯಾದ ಹಾಕಿ ಸ್ಟಿಕ್‌ಗಳೂ ಇರಲಿಲ್ಲ. ಕಟ್ಟಿಗೆಯ ಸ್ಟಿಕ್‌ಗಳನ್ನೇ ತಯಾರಿಸಿಕೊಂಡು ಬಳಸುತ್ತಿದ್ದರು. ಹೀಗೆ ಅವರ ತರಬೇತಿ ಕಲ್ಲು–ಮುಳ್ಳಿನ ಹಾದಿಯಿಂದ ಕೂಡಿತ್ತು. ರೈತಾಪಿ ವರ್ಗವೇ ಹೆಚ್ಚಾಗಿರುವ ಜಾರ್ಖಂಡ್‌ನಂತಹ ಪ್ರದೇಶದಲ್ಲಿ ಹಾಕಿ ಪ್ರವೇಶ ಪಡೆದಿದ್ದಾದರೂ ಹೇಗೆ? ಸಣ್ಣದೊಂದು ಕುತೂಹಲ. ಹುಡುಕುತ್ತಾ ಹೋದರೆ ಗೊತ್ತಾಗಿದ್ದು, ಈ ಊರುಗಳಿಗೆ ಸ್ವಾತಂತ್ರ್ಯಪೂರ್ವದಿಂದಲೂ ಹಾಕಿ ನಂಟಿದೆ ಎಂಬ ಸಮಾಚಾರ. ಆಗ, ಈ ಭಾಗದಲ್ಲಿ ಹೆಚ್ಚು ಕ್ರಿಯಾಶೀಲವಾಗಿದ್ದ ಕ್ರೈಸ್ತ ಮಿಷನರಿಗಳು ಹಳ್ಳಿಗರಿಗೆ ಹಾಕಿಯ ಹುಚ್ಚು ಹಿಡಿಸಿದರು. ಒಲಿಂಪಿಕ್ ಕೂಟದಲ್ಲಿ ಮೊತ್ತಮೊದಲ ಬಾರಿಗೆ ಭಾಗವಹಿಸಿದ್ದ ಭಾರತ ತಂಡದ ನೇತೃತ್ವ ವಹಿಸಿದ್ದ ಜೈಪಾಲ್ ಸಿಂಗ್ ಮುಂಡಾ ಇದೇ ಪ್ರದೇಶದವರು. 2000ರಲ್ಲಿ ಜಾರ್ಖಂಡ್ ರಾಜ್ಯ ಉದಯವಾದ ದಿನದಿಂದ ಇಲ್ಲಿಯವರೆಗೆ ಆ ರಾಜ್ಯದಿಂದ ಹಲವು ಹಾಕಿ ತಾರೆಯರು ಭಾರತ ತಂಡದಲ್ಲಿ ಮಿಂಚಿದ್ದಾರೆ.

ಸಲಿಮಾ ಅವರ ಸಿಮಡೇಗಾ ಜಿಲ್ಲೆಯು ನಕ್ಸಲ್ ಹಿಡಿತ ಸಾಧಿಸಿದ್ದ ಪ್ರದೇಶ. ಅಲ್ಲದೆ, ಬುಡಕಟ್ಟು ಜನಾಂಗಗಳ ನೆಲೆಬೀಡು. ಅಂತೆಯೇ ಹಾಕಿಪ್ರೇಮದ ನಾಡೂ ಹೌದು. ‘ನಮ್ಮ ಪ್ರದೇಶದಲ್ಲಿ ಹೆಚ್ಚು ಕಾವು ಪಡೆದುಕೊಂಡಿದ್ದ ಚಳವಳಿಗಳು, ಸಂಘರ್ಷಗಳು ನಮ್ಮ ಆಟದ ಮೇಲೆ ಅಷ್ಟಾಗಿ ಪರಿಣಾಮ ಬೀರಿಲ್ಲ. ನಮ್ಮ ತರಬೇತಿಗೆ ಕೂಡ ಯಾವುದೇ ಅಡಚಣೆಯಾಗಿಲ್ಲ’ ಎಂದು ಸಲಿಮಾ ವಿವರಿಸುತ್ತಾರೆ. ಸಲಿಮಾ ಅವರದಲ್ಲದೆ ಅವರ ಅಕ್ಕಪಕ್ಕದ ಊರುಗಳಲ್ಲಿ ಈಗಲೂ ನಲ್ಲಿ ನೀರು ಅಲಭ್ಯ. ಶೌಚಾಲಯಗಳು ಸಹ ಇಲ್ಲ. ಈಗೀಗ ಒಂದೊಂದಾಗಿ ಸೌಲಭ್ಯವನ್ನು ಕಾಣುತ್ತಿರುವ ಪ್ರದೇಶಗಳಿವು. ಕೆಲಸ ಹುಡುಕಿಕೊಂಡು ಮಹಾವಲಸೆ ಹೋಗುವವರಿಗೆ ಈ ಭಾಗದಲ್ಲಿ ಲೆಕ್ಕವೇ ಇಲ್ಲ. ಮಣ್ಣು ನಂಬಿ ಅಲ್ಲಿಯೇ ಬದುಕು ಕಟ್ಟಿಕೊಳ್ಳಲು ಹೆಣಗುತ್ತಿರುವ ತಂದೆ–ತಾಯಿಗಳಿಗೆ ಊರುಗೋಲಾಗಿ ನಿಂತಿರುವ ಸಲಿಮಾಗೆ ಹಾಕಿ ಸ್ಟಿಕ್ ಯಶಸ್ಸಿನ ಕೈದೀವಿಗೆಯಂತೆ ಸಿಕ್ಕಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65